# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.381/2025

| | | | |
|---|---|---|---|
| ಸಾಕ್ಷಿದಾರರ ಹೆಸರು | – | ನಾಗಮ್ಮ | ಸಿಡಬ್ಲ್ಯೂ-1 |
| ಗಂಡನ ಹೆಸರು | – | ಶಿವಣ್ಣ | ಪಿಡಬ್ಲ್ಯೂ-1 |
| ವಯಸ್ಸು | – | 45 ವರ್ಷ | |
| ಉದ್ಯೋಗ | – | ಕೂಲಿ | |
| ವಾಸ | – | ಉಪ್ಪಳಗೆರೆ ಗ್ರಾಮ | |

**ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.2 ನನ್ನ ಮಗ, ಚಾಸಾ. ನನ್ನ ಸೊಸೆ, ಚಾಸಾ.4 ರಿಂದ 8 ರವರು ಗೊತ್ತು . ಆರೋಪಿತರು ಗೊತ್ತು. ಆರೋಪಿತರು ನನಗಾಗಲೀ , ನನ್ನ ಮಗನಿಗಾಗಲೀ ಹೊಡಿ ಬಡಿ ಮಾಡಿಲ್ಲ. ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೋಲಿನಿಂದ ಹೊಡೆದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ಸಾಕ್ಷಿಗೆ ದೂರು ಮತ್ತು ಪಂಚನಾಮೆ ತೋರಿಸಲಾಗಿ ಸಾಕ್ಷಿ ಅವುಗಳಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಪಂಚನಾಮೆಯನ್ನು ನಿಪಿ-2 ಎಂದು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಕ್ರಮ ಜರುಗಿಸಿಲ್ಲ.ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ-1 ಮತ್ತು 2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ17.01.2025 ರಂದು ಸುಮಾರು 4.30 ಗಂಟೆ ಸಮಯದಲ್ಲಿ ಹಿರಿಯೂರು ತಾ. ಉಪ್ಪಳಗೆರೆ ಗ್ರಾಮದ ಅಂಗಡಿ ಕರಯಪ್ಪನವರ ಮನೆಯ ಮುಂದೆ ಆರೋಪಿತರು ಅಕ್ರಮ ಗುಂಪುಕಟ್ಟಿಕೊಂಡು ಬಂದು ಸೂಳೆ ಮಕ್ಕಳಾ ಭೋಳಿ ಮಕ್ಕಳು ಎಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಿರುವಾಗ ನಾನು ಮತ್ತು ಚಾಸಾ.2 ರವರು ಆರೋಪಿತರಿಗೆ ಏಕೆ ಗಲಾಟೆ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಆರೋಪಿತರು ನಮಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ಚಾಸಾ.2 ರವರಿಗೆ ಎದೆಗೆ ಮತ್ತು ಸೊಂಟಕ್ಕೆ ಹೊಡೆದು ಬಿಡಿಸಲು ಬಂದ ಚಾಸಾ., 4 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು , 1 ನೇ ಆರೋಪಿ ಕೋಲಿನಿಂದ ಚಾಸಾ.2 ರವರ ಬಲಕಣ್ಣಿಗೆ ಮತ್ತು ತಲೆಗೆ ಹೊಡೆದು ನನ್ನ ಕೈ ಹಿಡಿದು ಎಳೆದಾಡಿ ಸಾಮಾನ್ಯ ಸ್ವರೂಪದ ಗಾಯಮಾಡಿ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಪೊಲೀಸರಿಗೆ ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ದಿಃ18.01.2025 ರಂದು ಸುಮಾರು 5 ರಿಂದ 6 ಗಂಟೆ ಸಮಯದಲ್ಲಿ ಪೋಲಿಸರು ನನ್ನ ಹಾಗು ಚಾಸಾ.7 ಮತ್ತು 8 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ , ಕೋಲನ್ನು ವಶಪಡಿಸಿಕೊಂಡು ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ದಿಃ20.02.2025 ರಂದು ನನ್ನ ಮಗನ ಹೆಸರು ಕಿರಣ್ ಯಾನೆ ಕಿರಣ್ ಕುಮಾರ್ ಎಂದು ಅವರು ಮತ್ತು ಪುನೀತ್ ರವರ ಗಲಾಟೆ ಬಿಡಿಸಿದವರು ಗಂಗಾಧರ ಎಂಬುವವರು ಎಂದು ದೂರಿನಲ್ಲಿ ತಿಳಿಸಿದ್ದು ನಂತರ ಗಲಾಟೆ ಬಿಡಿಸಿದವರು ನಮ್ಮ ಗ್ರಾಮದ ಸೋಮಶೇಖರ್ ಎಂದು ತಿಳಿದು ನಾನು ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮರು ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಮರು ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಈಗ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ ಆರ್ ಆರ್ ವಕೀಲರಿಂದ–ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು